ರೀತಿಯ ಕ್ರಮಕೈಗೊಳ್ಳದೇ ಇರುವುದು ಏಕೆ? ಈ ಬಗ್ಗೆ ವಿವರವಾದ ವರದಿಯನ್ನು ಕೊಡುವುದು.

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಹೌದು. ಆದರೆ ಇದೊಂದು ಮನವಿಯಾಗಿದ್ದು ಸುತ್ತೋಲೆಯಾಗಿರುವುದಿಲ್ಲ.

ಆ) ಲೆಕ್ಕ ಇಟ್ಟಿರುತ್ತಾರೆ.

ಇ) ಇಲ್ಲ.

ಈ) ಪ್ರಶ್ನೆಯಲ್ಲಿ ಆಪಾದಿಸಿರುವಂತೆ ನೂರಾರು ಶಾಲೆಗಳಿಂದ ವಸೂಲಾತಿ ಮಾಡಿರುವುದಿಲ್ಲ. ಕೇವಲ ಮೂರು ಖಾಸಗಿ ಶಾಲೆಗಳವರು ತಲಾ ರೂ. 1000-00 ನಂತೆ ಸ್ವಪ್ರೇರಣೆಯಿಂದ ವಂತಿಕೆ ನೀಡಿರುವುದಾಗಿ ವರದಿಯಾಗಿದೆ. ಈ ಹಣ ಸದ್ಬಳಕೆಯಾಗಿರುವುದು ಮತ್ತು ದುರುಪಯೋಗವಾಗಿಲ್ಲದ ಮತ್ತು ಯಾವ ದುರುದ್ದೇಶದಿಂದಲೂ ಈ ಹಣವನ್ನು ಪಡೆದಿರುವುದಿಲ್ಲವೆಂದು ಮನವರಿಕೆಯಾಗಿದೆ. ಆದುದರಿಂದ ಸದರಿ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳುವ ಅಗತ್ಯತೆ ಕಂಡು ಬಂದಿರುವುದಿಲ್ಲ.

ತುಮಕೂರು ಜಿಲ್ಲೆಯಲ್ಲಿ ಕಪ್ಪು ಹಲಗೆ ಯೋಜನೆಯಡಿ ಮಾಡಲಾದ ಖರ್ಚು.

895 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಪ್ಪುಹಲಗೆ ಯೋಜನೆಯಡಿ 8ನೇ (ಹಂತ) ಪಟ್ಟಿಯಲ್ಲಿ ತುಮಕೂರು ಜಿಲ್ಲೆಗೆ ಮಂಜೂರಾದ ಹಣವೆಷ್ಟು?

ಆ) ಯಾವ ಬಾಬ್ತಿಗಾಗಿ ಖರ್ಚು ಮಾಡಲಾಗಿದೆ? (ವಿವರ ಒದಗಿಸುವುದು)

ಇ) ಈ ಯೋಜನೆಯ ನಿಯಮಾವಳಿಗಳನ್ನು ಮುರಿದು ಉಪಕರಣಗಳನ್ನು ಕೊಂಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಬಗ್ಗೆ ವಿಚಾರಣೆ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) ರೂ. 3,77,60,000.00

ಆ) ಪ್ರಸಕ್ತ ಭಂಡಾರದ ಪ್ರದೇಶಗಳಿಗೆ ರೂ. 30,72,355.00 ಖರ್ಚು ಮಾಡಲಾಗಿದೆ.

ಇ) ಇಲ್ಲ

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಪಿ.ಯು.ಸಿ. ವಿಜ್ಞಾನ ವಿಷಯದಲ್ಲಿ ಪಾಸು ಮಾಡಿರುವ ವಿದ್ಯಾರ್ಥಿಗಳಿಗೆ ಟಿ.ಸಿ.ಹೆಚ್. ದಾಖಲಾತಿಗೆ ಶೇಕಡ 50 ಕಡಿತ.

2428 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಟಿ.ಸಿ.ಹೆಚ್. ಪ್ರದೇಶದ ದಾಖಲಾತಿ ಬಗ್ಗೆ ಈ ವರ್ಷ ರಾಜ್ಯದಲ್ಲಿ ಬಂದಿರುವ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು. ರಾಜ್ಯದಲ್ಲಿರುವ ಸರ್ಕಾರಿ ವಲಯದ ವಿಜ್ಞಾನದ ವಿಷಯಕ್ಕೆ ಸಂಬಂಧಿಸಿದ ಒಟ್ಟು ಸೀಟುಗಳ ಸಂಖ್ಯೆ ಎಷ್ಟು?